ಈ ವರ್ಷದಿಂದ ನಾವು ಜಾರಿಗೆ ಕೊಟ್ಟಿದ್ದೇವೆ. ಮುಂದಿನ ವರ್ಷದಿಂದ ಅದನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸೇರಿ ಮಾಡಬೇಕಾಗಿದೆ; ಮುಂದಿನ ವರ್ಷ ಏನು ಮಾಡಬೇಕು ಎನ್ನುವ ಆಲೋಚನೆ ಮಾಡುತ್ತೇವೆ. ಹಾಗೂ ತೀರ್ಮಾನ ಮಾಡುತ್ತೇವೆ. ಇದು ರಾಜ್ಯಾದ್ಯಂತ ವಿಸ್ತಾರವಾಗಿರತಕ್ಕಂಥ ಸಮಸ್ಯೆ. ಈಗಿರತಕ್ಕಂಥ ಸಮಸ್ಯೆ ಬಗ್ಗೆ ನಾನು ಹೇಳಿದ್ದೇನೆ. ಅವರಿಗೂ ನಮಗೂ ವ್ಯತ್ಯಾಸ ಏನಿಲ್ಲ. ಎಷ್ಟು ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ ಎನ್ನುವುದನ್ನು ಅವರು ಒಪ್ಪುತ್ತಾರೆ. ಅವರು ಹೇಳಿರತಕ್ಕಂಥಾದ್ದು ನಿಜ. ವ್ಯತ್ಯಾಸ ಏನಿಲ್ಲ. ನಾನು ಹೇಳುವುದೇನೆಂದರೆ, ಕೆಲಾಮಿಟೀಸ್ ಫಂಡ್‌ನಲ್ಲಿ ಪರಿಹಾರ ಕೊಡುವುದರಲ್ಲಿ ಅವಕಾಶ ಇರತಕ್ಕಂಥಾದ್ದು ಒಂದು ಹೆಕ್ಟೇರ್‌ಗೆ 500 ರೂಪಾಯಿಯಿಂದ 2,000 ರೂಪಾಯಿಗಳವರೆಗೆ ಎಂದು ಇದೆ. ಅವರು ಹೆಚ್ಚು ಮಾಡಬೇಕೆಂದು ಹೇಳುತ್ತಿದ್ದಾರೆ. ನಾನೊಬ್ಬನೇ ಸರ್ಕಾರ ಅಲ್ಲ. ಮಾನ್ಯ ಖರ್ಗೆಯವರು ಸಚಿವ ಸಂಪುಟದ ಸಭೆಯಲ್ಲಿ ಹೆಚ್ಚು ಮಾಡಬಹುದು ಅಥವಾ ಕಡಿಮೆ ಮಾಡಬಹುದು ಎಂದು ಹೇಳಿದ್ದಾರೆ. ನಾನು ಅವರ ಮಾತಿನ ಪ್ರಕಾರವೇ ಹೇಳುತ್ತೇನೆ. ಅವರ ಮಾತನ್ನು ಒಪ್ಪುವುದಕ್ಕೆ ಇಷ್ಟಪಡುತ್ತೇನೆ. ಸಚಿವ ಸಂಪುಟದ ಸಭೆಯಲ್ಲಿ ನಿಮ್ಮ ಭಾವನೆಗಳು ಏನು ಇದೆ, ಆ ಭಾವನೆಗಳನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆ, ಮಾನ್ಯ ಹಣಕಾಸಿನ ಮಂತ್ರಿಗಳ ಹಾಗೂ ಇತರ ಸಹೋದ್ಯೋಗಿಗಳ ಜೊತೆ ರೈತರ ಪರವಾಗಿ ನಾನೂ ಕೂಡ ಒತ್ತಾಯ ಮಾಡಿದ್ದೇನೆ. ನಿಮ್ಮ ಭಾವನೆಗಳನ್ನು ಅಲ್ಲಿ ಪ್ರತಿಬಿಂಬಿಸತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡುತ್ತೇನೆನ್ನುವ ಮನವಿ ಮಾಡುತ್ತಾ, ಇದಕ್ಕಿಂತ ಹೆಚ್ಚಿಗೆ ಹೇಳುವುದಕ್ಕೆ ನನಗೆ ಆಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಇವರು ರೈತರ ಜೀವನದ ಬಗ್ಗೆ ನಿರ್ಲಕ್ಷ್ಯ ಮಾಡುತ್ತಿದ್ದಾರೆ. ಇವರು ಸದನದ ಸಮಿತಿ ಮಾಡುವುದಕ್ಕೆ ಒಪ್ಪಿಕೊಳ್ಳುತ್ತಿಲ್ಲ. ಒಂದು ಹೆಕ್ಟೇರ್‌ಗೆ 2,000 ರೂಪಾಯಿ ಕೊಡುವುದಕ್ಕೆ ಒಪ್ಪುತ್ತಾ ಇಲ್ಲ. ಈ ಸರ್ಕಾರದ ರೈತ ವಿರೋಧಿ ನೀತಿಯನ್ನು ಪ್ರತಿಭಟಿಸಿ ನಾವು ವಾಕ್‌ಔಟ್ ಮಾಡುತ್ತೇವೆ.

(ಈ ಹಂತದಲ್ಲಿ ಬಿಜೆಪಿಯ ಮಾನ್ಯ ಸದಸ್ಯರುಗಳೆಲ್ಲರೂ ಕೂಡ ಸಭಾತ್ಯಾಗ ಮಾಡಿದರು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ನಾನು ಕೇಳಿದ್ದುದು ಸ್ಪಷ್ಟ. ಏನೆಂದರೆ, ಸರ್ಕಾರ ನವೆಂಬರ್‌ನಿಂದ ಇಲ್ಲಿಯವರೆಗೆ ಎಂದರೆ ಮೂರು ತಿಂಗಳು ನೀವು ಇದನ್ನು ಏಕೆ ಅಲಕ್ಷ್ಯ ಮಾಡಿದಿರಿ ಎನ್ನುವುದು ಒಂದು ಪ್ರಶ್ನೆ. ನಿಮ್ಮ ರಿಪೋರ್ಟ್ ಡೆಪ್ಯೂಟಿ ಕಮಿಷನರ್‌ನಿಂದ, ಅಗ್ರಿಕಲ್ಚರ್ ಆಫೀಸರ್‌ನಿಂದ ಕಂಟಿನ್ಯೂಯಸ್ ಆಗಿ ಮೂರು ತಿಂಗಳಿನಿಂದ ಬರುತ್ತಿದೆ, ಬಂದರೂ ಕೂಡ ಕಾಂಪನ್‌ಸೇಷನ್ ಕೊಟ್ಟಿಲ್ಲ, ಏಕೆ? ಅದಕ್ಕೆ ನಿಮ್ಮಿಂದ ಉತ್ತರ ಇಲ್ಲ. ಇನ್ನು ಎರಡನೆಯದಾಗಿ ಕ್ರಾಪ್ ಇನ್ಸೂರೆನ್ಸ್ ಸ್ಕೀಮ್ ಏನಿದೆ, ಇದು ಈಗ ಇರುವ ಪ್ರಕಾರ